## ಇಲ್ಲಿಯವರೆಗೆ



ದಮಯಂತಿ, ತೇಜಸ್ ಇಬ್ಬರೂ ಆರೋಗ್ಯಪೂರ್ಣವಾಗಿ ಬೆಳೆಯುತ್ತಿದ್ದರು. ಯಾರಾದರೂ ಮಕ್ಕಳ ಮೇಲೆ ದೃಷ್ಟಿ ತಗಲಿಸಿಯಾರೋ ಎಂಬ ಭಯದಿಂದ ಸಾವಿತ್ರಿ ಇಬ್ಬರಿಗೂ ಪೊರಕೆ ಕಡ್ಡಿ ಬೆಂಕಿಗೆ ಹಾಕಿ ನೀವಾಳಿಸಿ ದೃಷ್ಟಿ ತೆಗೆಯುತ್ತಿದ್ದಳು. ಕಾರ್ಡಿಯಲ್ ಹೈಸ್ಕೂಲಿಗೆ ಇಬ್ಬರೂ ಸೇರುತ್ತಾರೆ. ಮಕ್ಕಳ ಓದಿಗೆ ಪೂರಕವಾಗಿ ಟ್ಯೂಶನ್‌ಗೂ ಸೇರಿಸುತ್ತಾರೆ. ತೇಜಸ್ ಶಾಲೆಯ ಕ್ರಿಕೆಟ್ ತಂಡದ ನಾಯಕನಾದರೆ ದಮಯಂತಿ ಸಾಂಸ್ಕೃತಿಕ ಚಟುವಟಿಕೆಯ ಕಾರ್ಯದರ್ಶಿಯಾಗುತ್ತಾಳೆ. ಎಸ್ಸೆಸ್ಸೆಲ್ಸಿಯಲ್ಲಿ ಮಕ್ಕಳು ಉತ್ತಮ ಫಲಿತಾಂಶದೊಂದಿಗೆ ಪಾಸಾಗುತ್ತಾರೆ. ಮುಂದೆ ಮಲ್ಲೇಶ್ವರಂನ ಎಂಇಎಸ್ ಕಾಲೇಜಿನಲ್ಲಿ ಇಬ್ಬರಿಗೂ ಪ್ರವೇಶ ದೊರಕುತ್ತದೆ. ಪಿಯುಸಿಯಲ್ಲೂ ಇಬ್ಬರಿಗೂ ಶೇ.90ಕ್ಕಿಂತಲೂ ಹೆಚ್ಚು ಅಂಕಗಳು ಬಂದಿದ್ದರಿಂದ ಕೆಂಗೇರಿ ಸಮೀಪದ ಆರ್‌ವಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸುಲಭವಾಗಿ ಪ್ರವೇಶವೂ ದೊರಕಿತು. ಈಗ ಕೃಷ್ಣನ ಮನಸ್ಸು ಆಧ್ಯಾತ್ಮ, ಪ್ರೇತಾತ್ಮದ ಕಡೆಗೆ ಹೊರಳುತ್ತದೆ.

ಹೇಳುತ್ತಿದ್ದು ಅದನ್ನು ಸಾವಿತ್ರಿ ನನಗೆ ಹೇಳುತ್ತಿದ್ದಳು. ಯಾರಾದರು ಹುಡುಗರು, ಹುಡುಗಿಯರ ಮಧ್ಯೆ ಗಲಾಟೆಗಳಾದರೆ ದಮಯಂತಿ ಹೋಗಿ ಜಗಳಗಳನ್ನು ತೀರ್ಮಾನ ಮಾಡುತ್ತಿದ್ದಳಂತೆ. ಹುಡುಗರು, ಹುಡುಗಿಯರನ್ನು ಛೇಡಿಸಿದರೆ ಹುಡುಗರಿಗೆ ಆವಾಜ್ ಹಾಕಿ ಹೆದರಿಸುತ್ತಿದ್ದಳಂತೆ. ಒಟ್ಟಿನಲ್ಲಿ ಕಾಲೇಜಿನಲ್ಲಿ ಬಜಾರಿ ಹೆಣ್ಣು ಮಗಳೆಂಬ ಪಟ್ಟ ಕಟ್ಟಿಕೊಂಡಿರುವುದಾಗಿ ತಿಳಿದು ಬಂದಿತು. ಸಾವಿತ್ರಿ ಒಂದು ದಿನ ಇದೆಲ್ಲವನ್ನು ಅವರ ತಂದೆ ತಾಯಿಗೆ ಹೇಳಿ ತೇಜಸ್ ಮತ್ತು ದಮಯಂತಿ ಇಬ್ಬರಿಗೂ ಬುದ್ಧಿ ಹೇಳಿ ಎಂದು ಹೇಳಿ ಬಂದಿದ್ದಳು. ಆದರೆ ಸಾವಿತ್ರಿಯ ತಂದೆ ತಾಯಿ ಮಕ್ಕಳಿಗೆ ಬುದ್ಧಿ ಹೇಳದೆ ಸಾವಿತ್ರಿಗೆ ತಿರುಗು ಮಂತ್ರ ಹಾಕಿ ಕಳುಹಿಸಿದ್ದರು.

ಇಬ್ಬರದೂ ಕೊನೆ ವರ್ಷದ ಡಿಗ್ರಿ ಪರೀಕ್ಷೆಗಳು ನಡೆಯುವ ವೇಳಾಪಟ್ಟಿ ಪ್ರಕಟವಾಗಿ ಇಬ್ಬರೂ ಮನೆಯಲ್ಲಿ ಕುಳಿತುಕೊಂಡು ಓದಿಕೊಳ್ಳುತ್ತಿದ್ದರು. ಜೊತೆಗೆ ಆಗಾಗ ಗೆಳೆಯರ ಜೊತೆಗೆ ರಿಲ್ಯಾಕ್ಸ್ ಮಾಡಿಕೊಳ್ಳಲು ಸಿನಿಮಾ, ಹೋಟೆಲು, ಪಾರ್ಟಿಗಳಿಗೆ ಹೋಗಿ ಬರುತ್ತಿದ್ದರು. ಅಂತೂ ಪರೀಕ್ಷೆಗಳು ಮುಗಿದು ಹೋಗಿ ನಮಗೂ ಸ್ವಲ್ಪ ನೆಮ್ಮದಿಯಾಯಿತು. ಆದರೆ ಇವರು ಗೆಳೆಯರ ಜೊತೆಗೆ ಹಗಲು ರಾತ್ರಿ ಎನ್ನದೇ ಓಡಾಡುವುದನ್ನು ನೋಡಿದರೆ ಕೋಪ ಉಕ್ಕಿ ಬರುತ್ತಿತ್ತು. ಹಣ ಕೊಟ್ಟಷ್ಟು ಮತ್ತಷ್ಟು ಖರ್ಚು ಮಾಡಿ ಬರುತ್ತಿದ್ದರು. ಹಣ ಎಷ್ಟು ಕೊಟ್ಟರೂ 'ನೀವು ಕೊಡೋ ಹಣ ಎಲ್ಲಿಗೆ ಸಾಕಾಗುತ್ತೆ? ನಮ್ಮ ಫ್ರೆಂಡ್ಸ್‌ನ್ನು ನೋಡಿ. ಎಷ್ಟು ಖರ್ಚು ಮಾಡ್ತಾರೆ? ಬೇರೆಯವರ ಮನೆಗಳಲ್ಲಿ ನೋಡೋಗಿ' ಎಂದು ನಮ್ಮನ್ನೇ ಹಂಗಿಸುತ್ತಿದ್ದರು. ಇವರು ಖರ್ಚುಗಳಲ್ಲದೆ ಇಬ್ಬರ ವಾಹನಗಳ ಪೆಟ್ರೋಲ್ ಖರ್ಚಿಗೂ ಹಣ ಕೊಡಬೇಕಾಗಿತ್ತು. ಇಬ್ಬರೂ ಆಗಾಗ ಕಾರನ್ನು ತೆಗೆದು ಕೊಂಡೋಗಿ ಪೆಟ್ರೋಲ್ ಟ್ಯಾಂಕ್ ಖಾಲಿ ಮಾಡಿಕೊಂಡು ಬರುತ್ತಿದ್ದರು. ಸಾವಿತ್ರಿ ಮನೆಗೆ ಕೊಡುವ ಹಣದಲ್ಲಿ ಉಳಿಸಿಕೊಂಡು ಇಬ್ಬರಿಗೂ ನನಗೆ ಗೊತ್ತಿಲ್ಲದೆ ಸ್ವಲ್ಪ ಸ್ವಲ್ಪ ಹಣ ಕೊಡುತ್ತಿದ್ದಳು. ಇದೆಲ್ಲದರ ಮೇಲೆ ಇವರು ಮಾಡುತ್ತಿರುವ ಕೆಲಸಗಳಿಂದ ನನಗೂ ಸಾವಿತ್ರಿಗೂ ಆತಂಕ ಕಡಿಮೆಯಾಗಲಿಲ್ಲ. ಯಾಕೊ ಏನೊ ನಡೆಯಬಾರದ್ದು ನಡೆದುಬಿಡುತ್ತದೊ ಏನೋ ಎಂಬ ಭಯ ನನ್ನ ಮನಸ್ಸಿನಲ್ಲಿ ಮನೆ ಮಾಡಿಕೊಂಡಿತ್ತು.

1980 ರಿಂದ 2000ರ ದಶಕಗಳ ಮಧ್ಯೆ..

ಒಂದು ದಿನ ಕಾಲೇಜಿನಿಂದ ಬೇಗನೆ ಮನೆಗೆ ಬಂದಿದ್ದೆ. ನನ್ನ ಆಗಮನದಿಂದ ವಿಚಲಿತಗೊಂಡ ಸಾವಿತ್ರಿ ಪಿಳಿಪಿಳಿ ಕಣ್ಣು ಬಿಟ್ಟುಕೊಂಡು ನೋಡತೊಡಗಿದಳು. ಅಷ್ಟರಲ್ಲಿ ತೇಜಸ್ ತನ್ನ ಕೋಣೆಯ ಬಾಗಿಲು ತೆಗೆದುಕೊಂಡು ಒಂದು ಹುಡುಗಿಯ ಜೊತೆಗೆ ಹೊರಕ್ಕೆ ಬಂದ. ನನ್ನನ್ನು ನೋಡಿದ ಅವರಿಬ್ಬರ ಮುಖಗಳ ಬಣ್ಣ ಬದಲಾಗಿ ಇಬ್ಬರೂ ತಡಬಡಿಸುತ್ತ ಎದುರಿಗೆ ನಿಂತುಕೊಂಡರು. ತೇಜಸ್ `Hai dad. she is Radha' ಎಂದ. ನಾನು ಮಾಮೂಲಿಯಾಗಿ `ಹಲೋ' ಎಂದೆ. ಆಕೆಯೂ `ಹಲೋ ಅಂಕಲ್' ಎಂದಳು. ಅಷ್ಟರಲ್ಲಿ ಸಾವಿತ್ರಿ ಹತ್ತಿರಕ್ಕೆ ಬಂದಿದ್ದೇ ತೇಜಸ್ 'ಮಮ್ಮಿ ಹೊರಕ್ಕೋಗಿ ಬರ್ತೀನಿ' ಎಂದಿದ್ದೇ ನಿಲ್ಲದೆ ಹೊರಟುಹೋದ. ಹುಡುಗಿ ನೋಡಲು ಚೆನ್ನಾಗಿಯೇ ಇದ್ದಳು. ಕಿಟಕಿಯಲ್ಲಿ ಹೊರಗೆ ಇಣಿಕಿ ನೋಡಿದೆ. ಇಬ್ಬರೂ ಕಾರಿನಲ್ಲಿ ಕುಳಿತುಕೊಂಡು ಹೊರಟು ಹೋದರು. ಸಾವಿತ್ರಿ `ನೋಡು ಕಥೆ ಯಾಕೊ ಕಾಂಪ್ಲಿಕೇಟೆಡ್ ಆಗ್ತಾಯಿದೆ. ನಿಮ್ಮಪ್ಪ, ಅಮ್ಮನ್ನ ಕರೆದು ವಿಷಯ ತಿಳಿಸು. ಅವರೇ ಏನಾದರೂ ಮಾಡ್ಲಿ. ನಾನು ಮಾತಾಡಿದರೆ 'ಜನರೇಶನ್ ಗ್ಯಾಪ್' ಅಂತಾನೆ. ಇಲ್ಲ, ನಮ್ಮ ಸಮಸ್ಯೆಗಳು ನಿಮಗೆ ಅರ್ಥ ಆಗೂವುದಿಲ್ಲ ಅಂತಾನೆ' ಎಂದೆ.

ಸಾವಿತ್ರಿ, `ತೇಜಸ್‌ನನ್ನು ಆ ಹುಡುಗಿ ಆಗಾಗ ಅವಳ ಮನೆಗೂ ಕರ್ಕೊಂಡು ಹೋಗ್ತಾಳಂತೆ' ಎಂದಳು. `ಸಾವಿ ನನಗ್ಯಾಕೊ ಸರಿ ಅನ್ನಿಸ್ತಾ ಇಲ್ಲ. ನಿಮ್ಮ ತಂದೆಗೆ ಫೋನ್ ಮಾಡಿ ತಿಳಿಸು. ಅವರೇ ಇವನ್ಗೆ ಧೈರ್ಯ ಕೊಟ್ಟಿರುವುದು' ಎಂದೆ. ಆ ಮಾತಂದಿದ್ದೇ ಕೋಪಗೊಂಡ ಸಾವಿತ್ರಿ ದಡಕ್ಕನೆ ಎದ್ದು ಹೋಗಿಬಿಟ್ಟಳು. ಯಾವ ಹೆಣ್ಣು ಮಗಳಾದರೂ ಸರಿ ಅವರ ತಂದೆ ತಾಯಿಯ ಬಗ್ಗೆ ತುಸುವೇ ಮಾತನಾಡಿದರು ಸಾಕು ಕೋಪ ಬರುವುದು ಸಹಜ. ಅಷ್ಟರಲ್ಲಿ ದಮಯಂತಿ ಮನೆ ಒಳಗೆ ಬಂದು `ಹಲೋ ಡ್ಯಾಡ್' ಎಂದು ನನ್ನ ಮುಂದೆ ಕುಳಿತುಕೊಂಡಳು. ನಾನು ಏನೂ ಮಾತನಾಡದೆ ಇರುವುದನ್ನು ನೋಡಿದ ಅವಳು ಎದ್ದು ಬಂದು `ಯಾಕೆ ಡ್ಯಾಡ್? ಏನಾಯಿತು?' ಎಂದು ನನ್ನ ಹೆಗಲನ್ನು ತಬ್ಬಿಕೊಂಡಳು. `ಏನೂ ಇಲ್ಲಮ್ಮ. ನಿಮ್ಮಣ್ಣ ಏನೋ ಸಾಹಸ ಮಾಡ್ತಾಯಿದ್ದಾನಂತೆ' ಎಂದಿದ್ದೆ `ಓ! ಅದಾ ವಿಷಯ? ಅದಕ್ಯಾಕೆ ಅಷ್ಟು ತಲೆ ಕೆಡಿಸಿಕೊಂಡಿದ್ದೀರಿ? ಇಬ್ಬರಿಗೂ ಇಷ್ಟ ಇದ್ದರೆ ಮದುವೆ ಮಾಡಿಕೊಳ್ತಾರೆ. ಇಲ್ಲ ಅಂದರೆ ಬಿಡ್ತಾರೆ' ಎಂದಳು. `ಹೌದಲ್ಲವ! ನಾನ್ಯಾಕೆ ತಲೆ ಕೆಡಿಸಿಕೊಳ್ಳಬೇಕು?' ದಮಯಂತಿ ಮಾತು ಕೇಳಿ ಸ್ವಲ್ಪ ಸಮಾಧಾನ ಸಿಕ್ಕಿದಂತಾಗಿ ಮನಸ್ಸು ಹಗುರವಾಯಿತು.